ಖಂಡಿತವಾಗಿಯೂ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಫಜ್ರ್ ನಮಾಜ್ ನಿರ್ವಹಿಸಿದ ನಂತರ, ಸೂರ್ಯನು ಚೆನ್ನಾಗಿ (ಎತ್ತರಕ್ಕೆ) ಉದಯಿಸುವವರೆಗೆ ತಮ್ಮ ನಮಾಝ್ ಸ್ಥಳದಲ್ಲೇ ಕುಳಿತುಕೊಳ್ಳುತ್ತಿದ್ದರು

ಜಾಬಿರ್ ಬಿನ್ ಸಮುರಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: "ಖಂಡಿತವಾಗಿಯೂ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಫಜ್ರ್ ನಮಾಜ್ ನಿರ್ವಹಿಸಿದ
ನಂತರ, ಸೂರ್ಯನು ಚೆನ್ನಾಗಿ (ಎತ್ತರಕ್ಕೆ) ಉದಯಿಸುವವರೆಗೆ ತಮ್ಮ ನಮಾಝ್ ಸ್ಥಳದಲ್ಲೇ ಕುಳಿತುಕೊಳ್ಳುತ್ತಿದ್ದರು." ವರದಿಗಾರರು (ಜಾಬಿರ್) ಹೇಳುತ್ತಾರೆ: "ಅವರು ತಾವು ಸುಬಹ್ ಅಥವಾ ಮುಂಜಾನೆಯ ನಮಾಝ್ ನಿರ್ವಹಿಸಿದ ಸ್ಥಳದಿಂದ, ಸೂರ್ಯ ಉದಯಿಸುವವರೆಗೆ ಏಳುತ್ತಿರಲಿಲ್ಲ. ಸೂರ್ಯ ಉದಯಿಸಿದ ನಂತರ ಅವರು ಏಳುತ್ತಿದ್ದರು. ಅವರು (ಸಹಾಬಾಗಳು) ಮಾತನಾಡುತ್ತಿದ್ದರು ಮತ್ತು
ಜಾಹಲಿಯ್ಯಾ ಕಾಲದ (ಅಜ್ಞಾನದ ಕಾಲದ) ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರು. ಆಗ ಅವರು
(ಸಹಾಬಾಗಳು) ನಗುತ್ತಿದ್ದರು ಮತ್ತು ಅವರು (ಪ್ರವಾದಿ) ಮುಗುಳ್ನಗುತ್ತಿದ್ದರು."
[صحيح] [رواه مسلم]

ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಚರ್ಯೆ ಏನೆಂದರೆ, ಅವರು ಫಜ್ರ್ ನಮಾಝ್ ನಿರ್ವಹಿಸಿದರೆ, ಸೂರ್ಯನು ಎತ್ತರಕ್ಕೆ ಉದಯಿಸುವವರೆಗೆ ತಮ್ಮ ನಮಾಝ್ ಸ್ಥಳದಲ್ಲೇ ಕುಳಿತುಕೊಳ್ಳುತ್ತಿದ್ದರು. ಅವರು ಸೂರ್ಯ ಉದಯಿಸುವವರೆಗೆ, ತಾವು ಫಜ್ರ್ ನಮಾಝ್ ನಿರ್ವಹಿಸಿದ ಸ್ಥಳದಿಂದ ಏಳುತ್ತಿರಲಿಲ್ಲ. ಸೂರ್ಯ ಉದಯಿಸಿದಾಗ ಅವರು ಏಳುತ್ತಿದ್ದರು. ಸಹಾಬಾಗಳು ಮಾತನಾಡುತ್ತಾ ಇಸ್ಲಾಮಿಗಿಂತ ಮುಂಚಿನ ತಮ್ಮ (ಜಾಹಲಿಯ್ಯಾ ಕಾಲದ) ಕೆಲವು ವಿಷಯಗಳನ್ನು ಚರ್ಚಿಸುತ್ತಿದ್ದರು. ಆಗ ಪ್ರವಾದಿಯವರು ಮೌನವಾಗಿರುತ್ತಿದ್ದರು. ಸಹಾಬಾಗಳು ನಗುತ್ತಿದ್ದರು ಮತ್ತು ಪ್ರವಾದಿಯವರು ಕೆಲವೊಮ್ಮೆ ಅವರೊಂದಿಗೆ ಮುಗುಳ್ನಗುತ್ತಿದ್ದರು.

http://www.sunnah.global/hadeeth/kn/show/65411